ಹೂವಿನ ಹಿಪ್ಪರಗಿ ಗ್ರಾಮಕ್ಕೆ ಪಶುವೈದ್ಯಶಾಲೆಯಂ ಮಂಜೂರಾತಿ

೧೧೦ (೨೮೭) ಶ್ರೀ ಬಿ. ಎಸ್. ಪಾಟೀಲ್ (ಬಸವನಬಾಗೇವಾಡಿ).—ಮಾನ್ಯ ಪಶು ಸಂಗೋಪನ ಪಶುವೈದ್ಯ ಸೇವೆಗಳು ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಬಸವನ ಬಾಗೇವಾಡಿಯ ತಾಲ್ಲೂಕಿನ ಹೂವಿನ ಹಿಪ್ಪರಗಿ ಗ್ರಾಮಕ್ಕೆ ಎರಡು ವರ್ಷಗಳ ಹಿಂದೆ ಪಶುವೈದ್ಯ ಶಾಲೆಯೊಂದು ಮಂಜೂರು ಆದದ್ದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಆ ಗ್ರಾಮಕ್ಕೆ ಯಾವ ಸಿಬ್ಬಂದಿಯನ್ನಾಗಲಿ ಔಷಧಿಯನ್ನಾಗಲಿ ಕೊಡದಿರುವುದಕ್ಕೆ ಕಾರಣವೇನು?

ಇ) ಹಾಗಿದ್ದಲ್ಲಿ ಸದರಿ ಪಶುವೈದ್ಯ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶುಪಾಲನಾ ಹಾಗೂ ತೋಟಗಾರಿಕೆ ಮಂತ್ರಿಗಳು).—

ಅ) ಬಂದಿದೆ.

ಆ) ಸರ್ಕಾರದ ೧೯೭೯ರ ಆದೇಶದಲ್ಲಿ ಸಿಬ್ಬಂದಿಗಳ ನೇಮಕಾತಿಯ ಬಗ್ಗೆ ಮತ್ತು ಔಷಧಿಗಳ ವಿತರಣೆಗೆ ಆರ್ಥಿಕ ಮಂಜೂರಾತಿ ಒಳಪಟ್ಟಿರಲಿಲ್ಲ.

ಇ) ಮೇಲಿನ ಕಾರಣದಿಂದಾಗಿ ಆ ಗ್ರಾಮಕ್ಕೆ ಸಿಬ್ಬಂದಿಯನ್ನಾಗಲಿ ಔಷಧಿಯನ್ನಾಗಲಿ ಒದಗಿಸಲಾಗಲಿಲ್ಲ. ತಾಂತ್ರಿಕ ಸಿಬ್ಬಂದಿ ಮತ್ತು ಆರ್ಥಿಕ ಅನುಕೂಲತೆ ನೋಡಿಕೊಂಡು ಅನುಕೂಲವಾದಾಗ ಆ ಬಗ್ಗೆ ಪರ್ಯಾಲೋಚಿಸಲಾಗುವುದು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಪಿ.ಯು.ಸಿ. ಅಂಕಪಟ್ಟಿಯ ಹಗರಣ

೧೧೧ (೫೫೮) ಶ್ರೀ ಪಿ.ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಪಿ.ಯು.ಸಿ. ಅಂಕಪಟ್ಟಿ ಹಗರಣದಲ್ಲಿ ತನಿಖೆಗೆ ಒಳಗಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಆ ಪೈಕಿ ಎಷ್ಟು ಮಂದಿ ವಿದ್ಯಾರ್ಥಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ?

ಇ) ತನಿಖಾ ಸಮಿತಿ ವರದಿಯ ಶಿಫಾರಸುಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಮತ್ತು ಆ) ಜಾಗೃತ ಆಯೋಗದವರು ೧೬೬ ವಿದ್ಯಾರ್ಥಿಗಳು ಎಂದು ಎಣಿಕೆಗೆ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲನೆ ನಡೆಯಿಸಿ, ಕೊಟ್ಟ ಸಲಹೆಯ ಮೇಲೆ ೪೧ ವಿದ್ಯಾರ್ಥಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಜಾಗ್ರತಾ ಆಯೋಗದವರು ಕೆಳಕಂಡಂತೆ ಶಿಫಾರಸು ಮಾಡಿದ್ದಾರೆ.

೧. ಮಂಡಳಿಯ ಕಾನೂನುಗಳನ್ನು ಉಲ್ಲಂಘಿಸಿ ಪುನರ್ ಮೌಲ್ಯಮಾಪನ ಮಾಡಲು ಅನುಮತಿ ನಿಡಿದ್ದಕ್ಕಾಗಿ ಈ ಕೆಳಕಂಡವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದು.

ಅ) ಶ್ರೀ ಎಸ್.ಪಿ. ಸತೀಶ್, ನಿರ್ದೇಶಕರು

ಆ) ಶ್ರೀ ಎ.ಎ. ಪೂವಯ್ಯ, ಉಪ ನಿರ್ದೇಶಕರು

ಇ) ಶ್ರೀ ಕೆ.ಎಸ್. ಕೃಷ್ಣಭಗವಾನ್, ಹಿರಿಯ ಸಹ ನಿರ್ದೇಶಕರು ಇವರುಗಳು.